ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
ಹಾಗೂ ಕಾರ್ಯದರ್ಶಿಗಳು
ಕರ್ನಾಟಕ ರಾಜ್ಯ ಕಟ್ಟಡ ಮತ್ತು
ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ

ಕರ್ನಾಟಕ ಸರ್ಕಾರ
ಕಾರ್ಮಿಕ ಇಲಾಖೆ

ಕಲ್ಯಾಣ ಸುರಕ್ಷಾ ಭವನ, ಐಟಿಐ ಕಾಲೇಜು ಆವರಣ,
ಬನ್ನೇರುಘಟ್ಟ ರಸ್ತೆ, ಬೆಂಗಳೂರು- 560029.
ಕಛೇರಿ:080-29753354, 29553354
kbocwwb@karnataka.gov.in

ಸಂಖ್ಯೆ: KBOCWWB/SEVA-SINDHU/CR-05/2020-21 Date:20/10/2023.

## ಸಾರ್ವಜನಿಕರ ಗಮನಕ್ಕೆ

ವಿಷಯ: ಕಟ್ಟಡ ಕಾರ್ಮಿಕರ ನೋಂದಣಿ, ನವೀಕರಣ ಹಾಗೂ ವಿವಿಧ ಯೋಜನಾ ಸೌಲಭ್ಯಗಳ ವಿಲೇವಾರಿಯನ್ನು ಮಂಡಳಿಯು ಅಭಿವೃದ್ಧಿಪಡಿಸಿರುವ ನೂತನ ತಂತ್ರಾಂಶವನ್ನು ಜಾರಿಗೊಳಿಸುತ್ತಿರುವ ಕುರಿತು.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ: ಕಾಇ: 383 ಎಲ್ಇಟಿ 2020, ಬೆಂಗಳೂರು ದಿನಾಂಕ:12.01.2021.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ನೋಂದಣಿ, ನವೀಕರಣ ಹಾಗೂ ವಿವಿಧ ಯೋಜನಾ ಸೌಲಭ್ಯಗಳ ಅರ್ಜಿಗಳನ್ನು ಸೇವಾಸಿಂಧು ತಂತ್ರಾಂಶದ ಮೂಲಕ ಸ್ವೀಕರಿಸಲಾಗುತ್ತಿದ್ದು, ಸದರಿ ಅರ್ಜಿಗಳನ್ನು ಕಾರ್ಮಿಕ ನಿರೀಕ್ಷಕರು/ ಹಿರಿಯ ಕಾರ್ಮಿಕ ನಿರೀಕ್ಷಕರು, ಕಾರ್ಮಿಕ ಅಧಿಕಾರಿಗಳು ಮತ್ತು ಸಹಾಯಕ ಕಾರ್ಮಿಕ ಆಯುಕ್ತರುಗಳು ಸೇವಾ ಸಿಂಧು ತಂತ್ರಾಂಶದ ಮೂಲಕ ಅನುಮೋದನೆ ನೀಡುತ್ತಿರುತ್ತಾರೆ, ಉಲ್ಲೇಖದ ಆದೇಶದನ್ವಯ ಮಂಡಳಿಗೆ ನೂತನ ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿರುತ್ತದೆ.

ಮಂಡಳಿಯ ನೂತನ ತಂತ್ರಾಂಶವನ್ನು ದಿನಾಂಕ:02/08/2023 ರಿಂದಲೇ ಅನ್ವಯವಾಗುವಂತೆ ಬೆಂಗಳೂರು ನಗರ ಮತ್ತು ಬಾಗಲಕೋಟೆ ಜಿಲ್ಲೆಗಳಿಗೆ ಪೈಲೆಟ್ ಮೋಡ್ ಮೂಲಕ ಚಾಲನೆ ಮಾಡಲಾಗಿತ್ತು.

ಮುಂದುವರೆದು, ದಿನಾಂಕ: 17/10/2023 ರಿಂದ ನೂತನ ತಂತ್ರಾಂಶವನ್ನು ರಾಜ್ಯಾದಾದ್ಯಂತ ಅನುಷ್ಠಾನಗೊಳಿಸಲಾಗಿದ್ದು, ಸೇವಾ ಸಿಂಧು ತಂತ್ರಾಂಶದ ಮೂಲಕ ಸ್ವೀಕೃತಗೊಳ್ಳುವ ಕಟ್ಟಡ ಕಾರ್ಮಿಕರ ನೋಂದಣಿ, ನವೀಕರಣ ಹಾಗೂ ವಿವಿಧ ಯೋಜನಾ ಸೌಲಭ್ಯಗಳಿಗಾಗಿ ಸ್ವೀಕೃತವಾಗುವ ಅರ್ಜಿಗಳನ್ನು Auto Re-Direct ಮೂಲಕ ನೇರವಾಗಿ ಮಂಡಳಿಯ ನೂತನ ತಂತ್ರಾಂಶಕ್ಕೆ ಲಿಂಕ್ ಮಾಡಲಾಗಿರುತ್ತದೆ. ಆದ್ದರಿಂದ, ಸಾರ್ವಜನಿಕರಿಗೆ ಮಂಡಳಿಯ ನೂತನ ತಂತ್ರಾಂಶಕ್ಕೆ ಸಂಬಂಧಿಸಿದಂತೆ, ಯಾವುದೇ ತಾಂತ್ರಿಕ ತೊಂದರೆಗಳು ಉದ್ಭವಿಸಿದಲ್ಲಿ, ಕಾರ್ಮಿಕ ಇಲಾಖೆಯ ಈ ಕೆಳಕಂಡ ಹೆಲ್ಪ್-ಲೈನ್‌ಗೆ ಸಂಪರ್ಕಿಸುವಂತೆ ಹಾಗೂ ನೂತನ ತಂತ್ರಾಂಶದ ಕೈಪಿಡಿಯನ್ನು ಮಂಡಳಿಯ ವೆಬ್ ಸೈಟ್‌ನಲ್ಲಿ (**https://karbwwb.karnataka.gov.in**) ಅಳವಡಿಸಲಾಗಿರುತ್ತದೆ ಎಂಬ ಮಾಹಿತಿಯನ್ನು ಈ ಮೂಲಕ ನೀಡಲಾಗಿದೆ.

ಮಂಡಳಿಯ ನೂತನ ತಂತ್ರಾಂಶದ URL: **https://kbocwwb.karnataka.gov.in**
ಕಾರ್ಮಿಕ ಇಲಾಖೆಯ ಹೆಲ್ಪ್-ಲೈನ್ ಸಂಖ್ಯೆ: 155214 (ಬೆಳಗ್ಗೆ: 06 ರಿಂದ ರಾತ್ರಿ 10ರ ವರೆಗೆ)
ಕಾರ್ಮಿಕ ಇಲಾಖೆಯ ವಾಟ್ಸ್‌ಆಪ್ ಸಂಖ್ಯೆ: 9845353214 (ಬೆಳಗ್ಗೆ: 06 ರಿಂದ ರಾತ್ರಿ 10ರ ವರೆಗೆ)

(ಭಾರತಿ.ಡಿ, ಭಾ.ಆ.ಸೇ)
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
ಹಾಗೂ ಕಾರ್ಯದರ್ಶಿಗಳು
ಕ.ಕ ಮತ್ತು ಇ.ನಿ.ಕಾ.ಕ ಮಂಡಳಿ